# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ B 177 (215)

ವಿಧಾನ ಪರಿಷತ್ತಿನ ಸದಸ್ಯರ ಹೆಸರು B ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವವರು B ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

ಉತ್ತರಿಸುವ ದಿನಾಂಕ B 16.07.2024

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಕಳೆದ ಒಂದು ವರ್ಷದಿಂದ ಯಾವ ಯಾವ ದೇಶಗಳಿಗೆ ಭೇಟಿ ನೀಡಿ, ರಾಜ್ಯದ ಕೈಗಾರಿಕೆ ಅಭಿವೃದ್ಧಿ ಹೊಂದಲು ಶ್ರಮಿಸಿರುತ್ತಾರೆ; | ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಕಳೆದ ಒಂದು ವರ್ಷದಿಂದ ಈ ಕೆಳಕಂಡ ದೇಶಗಳಿಗೆ ಹಿರಿಯ ಅಧಿಕಾರಿಗಳೊಂದಿಗೆ ಭೇಟಿ ನೀಡಿ ರಾಜ್ಯದ ಕೈಗಾರಿಕೆ ಅಭಿವೃದ್ಧಿ ಹೊಂದಲು ಶ್ರಮಿಸಿರುತ್ತಾರೆ.<br><br>1. ದಿನಾಂಕ 25.9.2023 ರಿಂದ 6.10.2023 ರವರೆಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ (ಯು.ಎಸ್.ಎ) ಗೆ ನಿಯೋಗವು ಪ್ರವಾಸ ಕೈಗೊಂಡಿದ್ದು, ಈ ಸಮಯದಲ್ಲಿ 36 ಕಂಪನಿಗಳೊಂದಿಗೆ ಸಭೆ, 27 ಕಂಪನಿ ಮುಖ್ಯಸ್ಥರೊಂದಿಗೆ ಪ್ರತ್ಯೇಕ ಸಭೆಗಳು ಹಾಗೂ 9 ಸಂವಾದ ಸಭೆಗಳನ್ನು ಹಮ್ಮಿಕೊಳ್ಳಲಾಗಿದೆ. ಇದರಿಂದ ರಾಜ್ಯಕ್ಕೆ ಅಂದಾಜು ರೂ.25,000 ಕೋಟಿ ಬಂಡವಾಳ ಪ್ರಸ್ತಾವನೆಗಳ ನಿರೀಕ್ಷಣೆ ಹೊಂದಿದೆ.<br><br>2. ದಿನಾಂಕ 15.01.2024 ರಿಂದ 19.01.2024ರವರೆಗೆ 54ನೇ World Economic Forum - 2024 Annual Meeting ರಲ್ಲಿ ಭಾಗವಹಿಸಿದ್ದು, ಈ 5 ದಿನಗಳಲ್ಲಿ 50ಕ್ಕೂ ಹೆಚ್ಚು ವಿಶ್ವನಾಯಕರು / ಬಹುರಾಷ್ಟ್ರೀಯ ಕಂಪನಿಗಳೊಂದಿಗೆ ಚರ್ಚಿಸಲಾಗಿದೆ. ಈ ಸಂದರ್ಭದಲ್ಲಿ ಒಟ್ಟು 8 ಸಂಸ್ಥೆಗಳೊಂದಿಗೆ ರೂ.23,285 ಕೋಟಿ ಬಂಡವಾಳ ಹೂಡಲು ರಾಜ್ಯ ಸರ್ಕಾರವು ಒಡಂಬಡಿಕೆ ಮಾಡಿಕೊಂಡಿದೆ.<br><br>3. ದಿನಾಂಕ 24.6.2024 ರಿಂದ 5.7.2024 ರವರೆಗೆ ಜಪಾನ್ ಮತ್ತು ಸೌತ್ ಕೋರಿಯಾ ದೇಶಗಳಿಗೆ ನೀಯೋಗವು ಭೇಟಿ ನೀಡಿದ್ದು. ಜಪಾನ್ ದೇಶದಲ್ಲಿಒಟ್ಟು 18 ಕಂಪನಿಗಳ ಮುಖ್ಯಸ್ಥರೊಂದಿಗೆ ಪ್ರತ್ಯೇಕ ಸಭೆಗಳನ್ನು ನಡೆಸಿದ್ದು, ಟೋಕಿಯೋ ನಗರದಲ್ಲಿ ಆಯೋಜಿಸಿದ ರೋಡ್ ಶೋನಲ್ಲಿ ಸುಮಾರು 125 ಕಂಪನಿಗಳು ಭಾಗವಹಿಸಿದ್ದರು. ಸೌತ್ ಕೋರಿಯಾ ದೇಶದಲ್ಲಿ ಒಟ್ಟು 16 ಕಂಪನಿಗಳ ಮುಖ್ಯಸ್ಥರೊಂದಿಗೆ ಪ್ರತ್ಯೇಕ ಸಭೆಗಳನ್ನುನಡೆಸಿದ್ದು, ಸಿಯೋಲ್ ನಗರದಲ್ಲಿಆಯೋಜಿಸಿದ ರೋಡ್ ಶೋನಲ್ಲಿ ಸುಮಾರು 50 ಕಂಪನಿಗಳು ಭಾಗವಹಿಸಿದ್ದರು.<br><br>ಈ ಸಮಯದಲ್ಲಿ ಒಟ್ಟು 5 ಕಂಪನಿಗಳೊಂದಿಗೆ ರೂ.1390 ಕೋಟಿ ಬಂಡವಾಳ ಹೂಡಲು ರಾಜ್ಯ ಸರ್ಕಾರವು ಒಡಂಬಡಿಕೆ ಮಾಡಿಕೊಂಡಿದ್ದು ಇದಲ್ಲದೇ ಅಂದಾಜು ರೂ.5,000 ಕೋಟಿ ಬಂಡವಾಳ ಪ್ರಸ್ತಾವನೆಗಳ ನಿರೀಕ್ಷಣೆ ಹೊಂದಿದೆ. |

| | | |
|---|---|---|
| ಆ | ಕಳೆದ ಒಂದು ವರ್ಷದಿಂದೀಚೇಗೆ ರಾಜ್ಯದಲ್ಲಿ ಎಷ್ಟು ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ ಹಾಗೂ ಮುಂದೆ ಸ್ಥಾಪಿಸಲು ಯಾವ ಯಾವ ದೇಶದ ಬಂಡವಾಳ ಶಾಹಿಗಳು ಯಾವ ಯಾವ ರೀತಿಯ ಕೈಗಾರಿಕೆ ಸ್ಥಾಪಿಸಲು ಮುಂದೆ ಬಂದಿರುತ್ತಾರೆ ಹಾಗೂ ಯಾವ ಯಾವ ಕೈಗಾರಿಕೆಗಳಿಗೆ ಎಷ್ಟೆಷ್ಟು ಬಂಡವಾಳ ಹೂಡಲಾಗುವುದು; | ಈ ಹಿಂದೆ ಅನುಮೋದನೆ ಪಡೆದ ಯೋಜನೆಗಳಲ್ಲಿ 2023-24ನೇ ಸಾಲಿನಲ್ಲಿ ರಾಜ್ಯದಲ್ಲಿ 12 ಬೃಹತ್ ಕೈಗಾರಿಕೆಗಳು ಪ್ರಾರಂಭಗೊಂಡಿರುತ್ತವೆ.<br><br>ಮುಂದುವರೆದಂತೆ, 2023-24ನೇ ಸಾಲಿನಲ್ಲಿ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆ ಹಾಗೂ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆಯಲ್ಲಿ ಒಟ್ಟು 591 ಬಂಡವಾಳ ಹೂಡಿಕೆ ಯೋಜನಗಳಿಗೆ ಅನುಮೋದನೆಯನ್ನು ನೀಡಲಾಗಿದೆ. ಈ ಯೋಜನೆಗಳಿಂದ ಒಟ್ಟು ರೂ. 84,231.87 ಕೋಟಿ ಹೂಡಿಕೆಯಾಗಲಿದೆ. |
| ಇ | ಈ ಕೈಗಾರಿಕೆಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ಸ್ಥಾಪಿಸಲು ತೀರ್ಮಾನಿಸಲಾಗಿದೆ; | ಅನುಮೋದನೆಗೊಂಡ 591 ಬಂಡವಾಳ ಹೂಡಿಕೆ ಯೋಜನೆಗಳು 27 ವಿವಿಧ ಜಿಲ್ಲೆಗಳಲ್ಲಿ ಅನುಷ್ಠಾನಗೊಳ್ಳಲಿವೆ. |
| ಈ | ಕೇವಲ ಒಂದೇ ನಗರದಲ್ಲಿ ಕೈಗಾರಿಕೆ ಸ್ಥಾಪಿಸದೆ ಬೆಂಗಳೂರಿನಿಂದ 100 ರಿಂದ 150 ಕೀ. ಮೀಟರ್ ವ್ಯಾಪ್ತಿಯ ತಾಲ್ಲೂಕುಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು? | ಪ್ರಾದೇಶಿಕ ಅಭಿವೃದ್ಧಿ ಜೊತೆಗೆ ರಾಜ್ಯದಲ್ಲಿ ಸಮತೋಲನ ಹೊಂದಿದ ಹೂಡಿಕೆ ಖಾತರಿಪಡಿಸುವುದು ರಾಜ್ಯದ ಪ್ರಮುಖ ಜವಾಬ್ದಾರಿಯಾಗಿದೆ. ಯಾವ ಪ್ರದೇಶಗಳಲ್ಲಿ ಕೈಗಾರಿಕೆಗಳು ಕಡಿಮೆ ಪ್ರಮಾಣದಲ್ಲಿವೆಯೋ ಅಥವಾ ಅವಕಾಶ ವಂಚಿತ ಪ್ರದೇಶಗಳು ಎನಿಸುವುದೋ ಅಂತಹ ಕಡೆಗಳಲ್ಲಿ ಹೂಡಿಕೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕೈಗಾರಿಕಾ ನೀತಿ 2020-24ರಲ್ಲಿ ರಾಜ್ಯವನ್ನು ವಲಯಗಳನ್ನಾಗಿ ವಿಂಗಡಿಸಿದ್ದು, ಹಿಂದುಳಿದ ವಲಯಗಳಿಗೆ ವಿಶೇಷ ಗಮನ ನೀಡಲಿದೆ.<br><br>ಕಲ್ಯಾಣ ಕರ್ನಾಟಕ ಸೇರಿದಂತೆ ಉತ್ತರ ಕರ್ನಾಟಕದ ಎರಡನೇ ಮತ್ತು ಮೂರನೇ ಸ್ತರದ ನಗರಗಳಿಗೆ ಹೆಚ್ಚಿನ ಉತ್ತೇಜನ ನೀಡಲಿದ್ದು, ಕೈಗಾರಿಕೆಗಳಿಗೆ ಅನುಕೂಲವಾಗುವ ವಾತಾವರಣ/ಪರಿಸರ ನಿರ್ಮಾಣ, ಮೂಲಸೌಲಭ್ಯ ಅಭಿವೃದ್ಧಿ, ಈ ಭಾಗದ ಜನರಿಗೆ ನ್ಯಾಯಯುತವಾದ ಅವಕಾಶಗಳನ್ನು ನೀಡಲಿದೆ. ಈ ಉಪಕ್ರಮವು ಉತ್ತರ ಕರ್ನಾಟಕದ ಕೈಗಾರಿಕಾ ಸಾಮರ್ಥ್ಯವನ್ನು ಸಾಬೀತು ಮಾಡುವ ಜೊತೆಗೆ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಖಚಿತಪಡಿಸಲಿದೆ. |

ಸಿಐ 217 ಎಸ್‌ಪಿಐ 2024

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು